**ದಿನಾಂಕಃ 24/08/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎಸ್.ಎಸ್.ಜಿ ವಕೀಲರಿಂದಃ**

1. ದಾವಾಸ್ವತ್ತಿಗೆ ಸಂಬಂಧಿಸಿದಂತೆ 1 ರಿಂದ 3 ನೇ ಪ್ರತಿವಾದಿಗಳ ತಂದೆ ನನ್ನ ಮತ್ತು ನನ್ನ ತಂದೆಯ ಖಾತೆಯನ್ನು ಪ್ರಶ್ನಿಸಿ ಡಿ.ಸಿ.ಯವರ ಮುಂದೆ ಮೇಲ್ಮನವಿ ಸಲ್ಲಿಸಿದ್ದಾರೆ ಎಂದರೆ ಸರಿ. ಡಿ.ಸಿ. ನ್ಯಾಯಾಲಯದಿಂದ ನನಗೆ ನೋಟೀಸು ಬಂದಿದೆ ಎಂದರೆ ಸರಿ. ಡಿ.ಸಿ.ಯವರು ಎ.ಸಿ.ಯವರ ಆದೇಶಕ್ಕೆ ತಡೆಯಾಜ್ಞೆ ನೀಡಿದ್ದಾರೆ ಎಂದರೆ ಸರಿ.

2. ದಾವಾಸ್ವತ್ತು ನನ್ನ ತಂದೆ ಕಾಳಪ್ಪನವರಿಂದ ಬರೆಸಿಕೊಂಡ ಸ್ವತ್ತು. ಹಾಗೆ ಬರೆಸಿಕೊಂಡ ಕ್ರಯಪತ್ರವನ್ನು ನಾನು ನೋಡಿದ್ದೇನೆ. ಅದರ ಸರ್ವೆ ನಂಬರ್ 67. ಅದರ ವಿಸ್ತೀರ್ಣ 2 ಎಕರೆ 1 ಗುಂಟೆ. ನನ್ನ ತಂದೆ ಬರೆಸಿಕೊಂಡ ಕ್ರಯಪತ್ರದಲ್ಲಿ ವಿಸ್ತೀರ್ಣ 1 ಎಕರೆ 1 ಗುಂಟೆ ಇದೆ. ನೀವು ಸರ್ವೆ ನಂಬರ್ 67/2 ಕ್ಕೆ 1 ಎಕರೆ 1 ಗುಂಟೆಗೆ ದಾವೆ ಹೂಡಿದ್ದೀರಿ ಎಂದರೆ ಸಾಕ್ಷಿಯು ನಾನು 2 ಸರ್ವೆ ನಂಬರ್ ಗಳಿಗೆ ದಾವೆ ಹೂಡಿದ್ದೇನೆ ಎಂದು ನುಡಿಯುತ್ತಾರೆ. ನನ್ನ ತಂದೆ ಕ್ರಯಪತ್ರದ ಅನ್ವಯ ಖಾತೆ ಮಾಡಿಸಿಕೊಂಡಿಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆ ಮೃತಗೊಂಡ ನಂತರ ನಾವು ಅಣ್ಣತಮ್ಮಂದಿರು ವಿಭಾಗ ಮಾಡಿಕೊಂಡು ವಿಭಾಗ ಮಾಡಿಸಿಕೊಂಡಿದ್ದೇವೆ ಎಂದು ನುಡಿಯುತ್ತಾರೆ.

3. ನನ್ನ ತಂದೆ ಕಾಳಪ್ಪನವರಿಂದ ದಿಃ 05/05/1993 ರಲ್ಲಿ ಸರ್ವೆ ನಂಬರ್ 71 ರಲ್ಲಿರುವ 2 ಎಕರೆ 20 ಗುಂಟೆ ಜಮೀನನ್ನು ಖರೀದಿಸಿದ್ದರು ಎಂದರೆ ಸರಿ. ನನ್ನ ತಂದೆ ಸರ್ವೆ ನಂಬರ್ 71/2 ರಲ್ಲಿ ಖಾತೆಯನ್ನು ಮಾಡಿಸಿಕೊಂಡಿಲ್ಲ. ನನ್ನ ತಂದೆ ಸರ್ವೆ ನಂಬರ್ 67 ಕ್ಕೆ ಸಂಬಂಧಿಸಿದಂತೆ ಖಾತೆಯನ್ನು ಮಾಡಿಸಿಕೊಂಡಿದ್ದಾರೆ ಎಂದರೆ ಸರಿ. ಸರ್ವೆ ನಂಬರ್ 67 ಕ್ಕೆ ಸಂಬಂಧಿಸಿದಂತೆ ಡಿ.ಸಿ. ನ್ಯಾಯಾಲಯದಲ್ಲಿ ಪ್ರಕರಣ ನಡೆಯುತ್ತಿದೆ ಎಂದರೆ ಸರಿ. ದಾವಾಸ್ವತ್ತುಗಳಿಗೆ ಕೊಟ್ಟ ಚಕ್ಕುಬಂದಿಯ ಜಾಗದಲ್ಲಿ ಸರ್ವೆ ನಂಬರ್ 71/2 ಇಲ್ಲ ಎಂದರೆ ಸರಿಯಲ್ಲ. ನಿಮ್ಮ ತಂದೆ ಸರ್ವೆ ನಂಬರ್ 71/2 ರಲ್ಲಿ ಜಮೀನನ್ನು ಖರೀದಿಸಿದ್ದರು, ಆದರೆ ಸರ್ವೆ ನಂಬರ್ 67 ರ ಜಮೀನಿನ ಖಾತೆಯನ್ನು ಮಾಡಿಸಿಕೊಂಡಿದ್ದಾರೆ ಆ ಕಾರಣಕ್ಕೆ ನಿಮ್ಮ ತಂದೆಯ ಖಾತೆ ಸರಿಯಿಲ್ಲ ಎಂದರೆ ಸಾಕ್ಷಿಯು ನನ್ನ ತಂದೆಗೆ ಸರ್ವೆ ನಂಬರ್ 71 ರಲ್ಲಿ

ಮತ್ತು 67 ರಲ್ಲಿ ಜಮೀನು ಇದೆ ಎಂದು ನುಡಿಯುತ್ತಾರೆ. ನನ್ನ ತಂದೆಗೆ ತಪ್ಪಾಗಿ ಬಂದಂತಹ ಖಾತೆ ನಮ್ಮ ಹೆಸರಿಗೆ ವಿಭಾಗ ಪತ್ರದ ಮುಖಾಂತರ ಖಾತೆ ಆಗಿದೆ ಎಂದರೆ ಸರಿ. ನನ್ನ ತಂದೆ ಖರೀದಿ ಮಾಡಿದ ಸ್ವತ್ತು ಬೇರೆ ನಾವು ಖಾತೆ ಮಾಡಿಸಿಕೊಂಡ ಸ್ವತ್ತು ಬೇರೆ ಎಂದರೆ ಸರಿಯಲ್ಲ

4. ಪ್ರತಿವಾದಿಗಳು ನನ್ನ ದಾವೆಗೆ ಏನು ತಕರಾರು ಮಾಡಿದ್ದಾರೆ ಎಂದು ನಾನು ತಿಳಿದುಕೊಂಡಿಲ್ಲ. ನನ್ನ ತಂದೆ ಮಾಡಿಸಿಕೊಂಡಿರುವ ಖಾತೆ 1 ರಿಂದ 3 ನೇ ಪ್ರತಿವಾದಿಗಳ ತಂದೆಗೆ ಸೇರಿದ ಸ್ವತ್ತು ಎಂದರೆ ಸರಿಯಲ್ಲ. ಪ್ರತಿವಾದಿಗಳು ನಮ್ಮ ದಾವೆಗೆ ಖಾತೆ ಸರಿಯಿಲ್ಲ ಮತ್ತು ಸ್ವಾಧೀನದಲ್ಲಿಲ್ಲ ಎಂದು ತಕರಾರು ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ಕ್ರಯಪತ್ರದ ಪ್ರಕಾರ ಖಾತೆ ಮಾಡಿಸಿಕೊಂಡಿಲ್ಲದ ಕಾರಣ ಮೋಸದ ಖಾತೆ ಎಂದರೆ ಸರಿಯಲ್ಲ. ನಾವು ವಿಭಾಗ ಮಾಡಿಕೊಳ್ಳುವ ಪೂರ್ವದಲ್ಲಿ ದಾವಾಸ್ವತ್ತುಗಳು ಏನಾಗಿತ್ತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಆದ್ದರಿಂದ ಹಿಂದಿನ ಸತ್ಯಾಂಶವನ್ನು ಈಗ ಹೇಳಲು ಬರುವುದಿಲ್ಲ ಎಂದರೆ ಸರಿ. ನಾವು ದಾವಾಸ್ವತ್ತಿನ ಸ್ವಾಧೀನದಲ್ಲಿ ಇರುವ ಬಗ್ಗೆ ನೋಡಿದವರ ಹೆಸರನ್ನು ಹೇಳಲು ಆಗುವುದಿಲ್ಲ. ನಾನು ದಾವಾಸ್ವತ್ತಿನಲ್ಲಿ ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾವಾಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

5. ಪ್ರತಿವಾದಿಗಳ ತಂದೆ ತೀರಿಕೊಂಡಿದ್ದಾರೆ. ಪ್ರತಿವಾದಿಗಳ ತಂದೆ ಜೀವಂತ ಇರುವಾಗ ಪ್ರತಿವಾದಿಗಳೊಂದಿಗೆ ಅವರೂ ಸಹ ದಾವಾಸ್ವತ್ತಿನಲ್ಲಿ ಸ್ವಾಧೀನ ಇದ್ದರು ಎಂದರೆ ಸರಿಯಲ್ಲ. ಅವರು ತೀರಿಕೊಂಡ ನಂತರವೂ ಪ್ರತಿವಾದಿಗಳು ದಾವಾಸ್ವತ್ತಿನ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ನಾವು ದಾವಾಸ್ವತ್ತಿನಲ್ಲಿ ಸ್ವಾಧೀನ ಇಲ್ಲದಿದ್ದರೂ ಸುಳ್ಳು ದಾವೆಯನ್ನು ಹೂಡಿ, ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

6. ನಿಪಿ.7 ಪೋಟೋಗಳಲ್ಲಿ ನನ್ನ ಭಾವಚಿತ್ರ ಇಲ್ಲ. ನಿಪಿ.7 ರ ಪೋಟೋಗಳಲ್ಲಿ ಯಾರೂ ಉಳುಮೆ ಮಾಡುತ್ತಿರುವ ಬಗ್ಗೆ ಎಲ್ಲೂ ಗೋಚರ ಇಲ್ಲ ಎಂದರೆ ಸಾಕ್ಷಿಯು ಅದು ನಮ್ಮ ಬೆಳೆ ಎಂದು ನುಡಿಯುತ್ತಾರೆ. ನಿಪಿ.7 ರಲ್ಲಿ ಯಾವ ವ್ಯಕ್ತಿಯೂ ಸಹ

ಉಳುಮೆ ಮಾಡುತ್ತಿರುವ ಬಗ್ಗೆ ಭಾವಚಿತ್ರ ಇಲ್ಲ ಎಂದರೆ ಸರಿ. ನಿಪಿ.7 ಪೋಟೊಗಳನ್ನು 2017ರಲ್ಲಿ ತೆಗೆಸಿರುತ್ತೇವೆ. ನಮ್ಮ ದಾವಾಪತ್ರದಲ್ಲಿ 2017ರಲ್ಲಿ ಮುಸುಕಿನ ಜೋಳವನ್ನು ಬೆಳೆದಿದ್ದೆವು ಎಂದು ಹೇಳಿ ಬರೆಸಿಲ್ಲ. ಈಗ ಪೋಟೋ ತೆಗೆಸಿದರೆ ಪೋಟೋ ಮೇಲೆ ದಿನಾಂಕ, ತಿಂಗಳು ಮತ್ತು ವರ್ಷ ನಮೂದಾಗುತ್ತದೆ ಎಂದರೆ ಸರಿ. ನಿಪಿ.7ರ ಪೋಟೊಗಳಲ್ಲಿ ದಿನಾಂಕ, ತಿಂಗಳು ವರ್ಷ ನಮೂದಾಗಿಲ್ಲ ಎಂದರೆ ಸರಿ. ನಿಪಿ.7ರಲ್ಲಿರುವ ಪೋಟೋಗಳು ದಾವಾಸ್ವತ್ತಿಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ನಿಪಿ.7 ರಲ್ಲಿ ನನ್ನ ಮತ್ತು ನಮ್ಮ ಕುಟುಂಬದವರ ಭಾವಚಿತ್ರ ಇಲ್ಲ ಎಂದರೆ ಸರಿ. ನಿಪಿ.7ರಲ್ಲಿ ತೋರಿಸಿರುವ ಬೆಳೆ ಪ್ರತಿವಾದಿಗಳು ಬೆಳೆದಿರುವ ಬೆಳೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಇಲ್ಲದ ಸಮಯದಲ್ಲಿ ನಾವು ದಾವಾಸ್ವತ್ತಿಗೆ ಬೇಟಿ ಮಾಡಿ ನಿಪಿ.7ರ ಪೋಟೋಗಳನ್ನು ತೆಗೆದಿದ್ದೇವೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ನ್ಯಾಯಾಲಯದ ಬೆಳಗಿನ ಅವಧಿ ಮುಗಿದ ಕಾರಣ ಮಧ್ಯಾಹ್ನದ ಅವಧಿಗೆ ಮುಂದೂಡಲಾಯಿತು)

**<u>ತೆರದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು</u>**

**<u>ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.</u>**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**

**<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ</u>** <u>ಶ್ರೀ ಎಸ್.ಎಸ್.ಜಿ</u> **<u>ವಕೀಲರಿಂದಃ</u>**

7. ದಿಃ14/08/2017ರಂದು ನಾನು ಈ ದಾವೆಯನ್ನು ಹೂಡಿದ್ದೇನೆ. ದಿಃ10/08/2017 ರಂದು ಪ್ರತಿವಾದಿಗಳು ದಾವಾಸ್ವತ್ತಿನಲ್ಲಿ ಕಲ್ಲು ಕಂಬಗಳನ್ನು ನೆಟ್ಟಿದ್ದರು ಎಂದರೆ ಸರಿಯಲ್ಲ. 230 ಕಲ್ಲುಕಂಬಗಳನ್ನು ನಾವು ಮತ್ತು ನಮ್ಮ ಕುಟುಂಬದವರು ಎಲ್ಲರೂ ಸೇರಿ ಹೊಡೆದು ಹಾಕಿದ್ದೆವು ಎಂದರೆ ಸರಿಯಲ್ಲ. ದಿಃ13/08/2017ರಂದು

ನಾವು ಕಲ್ಲು ಕಂಬಗಳನ್ನು ಹೊಡೆದು ಹಾಕಿದ್ದೇವೆ ಎಂದು 1 ನೇ ಪ್ರತಿವಾದಿ ನನ್ನ ಮತ್ತು ಇತರೆ 14 ಜನರ ವಿರುದ್ಧ ದೂರನ್ನು ಸಲ್ಲಿಸಿದ್ದರು ಎಂದರೆ ಸರಿ. ಆ ದೂರು ಸಿ.ಸಿ.383/2018 ರಲ್ಲಿ ಪ್ರಕರಣ ದಾಖಲಾಗಿದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನಾವು 50 ಸಾವಿರ ರೂಪಾಯಿಗಳನ್ನು ಕೊಟ್ಟು ಪ್ರಕರಣವನ್ನು ರಾಜೀ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸದರಿ ಪ್ರಕರಣ ವಜಾ ಆಗಿದೆ. ಸದರಿ ಪ್ರಕರಣ ರಾಜೀ ರೀತಿ ವಜಾಗೊಂಡಿದೆ ಎಂದರೆ ಸರಿಯಲ್ಲ.

8. ಕಲ್ಲು ಕಿತ್ತ ಬಗ್ಗೆ ತಹಶೀಲ್ದಾರ್ ರವರ ಮುಂದೆ ಪ್ರಕರಣ ದಾಖಲಾಗಿದ್ದು ಅದರಲ್ಲಿ ನನಗೆ ನೋಟೀಸು ಬಂದಿತ್ತು ಎಂದರೆ ಸರಿಯಲ್ಲ. ತಹಶೀಲ್ದಾರ್ ರವರು ನನಗೆ 50 ಸಾವಿರ ರೂಪಾಯಿಗಳನ್ನು ದಂಡ ವಿಧಿಸಿದ್ದರು ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರಗಳು ಗೊತ್ತಿದ್ದರೂ ನಾನು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

9. ಸರ್ವೆ ನಂಬರ್ 67/2 ರ 1 ಎಕರೆ 1 ಗುಂಟೆ ಜಮೀನಿನ ಪೂರ್ವಕ್ಕೆ ವೈರಮುಡಿ ಯವರ ಜಮೀನು ಎಂದರೆ ಸರಿಯಲ್ಲ. ಆದರೆ ವೆಂಕಟೇಗೌಡರವರ ಜಮೀನು. ಪಶ್ಚಿಮಕ್ಕೆ ಪರ್ಲೆ ಬಸವ ರವರ ಜಮೀನು ಎಂದರೆ ಸರಿಯಲ್ಲ. ಉತ್ತರಕ್ಕೆ ರಸ್ತೆ ಎಂದರೆ ಸರಿ. ದಕ್ಷಿಣಕ್ಕೆ ಜವರೇಗೌಡರ ಜಮೀನು ಎಂದರೆ ಸರಿಯಲ್ಲ, ಆದರೆ ನನ್ನ ಜಮೀನು ಇದೆ. ದಾವ ಐಟಂ ನಂ.1 ರ ಚಕ್ಕುಬಂದಿ ಸರಿ ಇದೆ ಎಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬರ್ 67/3 ರ ಪೂರ್ವಕ್ಕೆ ಸರ್ವೆ ನಂಬರ್ 67/2 ಎಂದರೆ ಸರಿ. ಪಶ್ಚಿಮಕ್ಕೆ ಪರ್ಲೆ ಬಸವ ರವರ ಜಮೀನು ಎಂದರೆ ಸರಿಯಲ್ಲ. ಆದರೆ ರಾಮಚಂದ್ರಚಾರಿಯವರ ಜಮೀನು ಇದೆ, ಅದರ ಸರ್ವೆ ನಂಬರ್ ಗೊತ್ತಿಲ್ಲ. ರಾಮಚಂದ್ರಚಾರಿಯವರ ಜಮೀನಿನ ಪೂರ್ವಕ್ಕೆ ನನ್ನ ಜಮೀನು ಇದೆ. ರಾಮಚಂದ್ರಚಾರಿಯವರ ಜಮೀನಿನ ಪಶ್ಚಿಮಕ್ಕೆ ಹುಚ್ಚೇಗೌಡರವರ ಜಮೀನು ಇದೆ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಹುಚ್ಚೇಗೌಡರವರ ಜಮೀನು.

10. ದಾವಾ ಐಟಂ ನಂ.1 ಮತ್ತು 2 ರ ಚಕ್ಕುಬಂದಿ ಸರಿಯಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಕೊಟ್ಟ ದೂರಿನ ನಂತರ ಮಾರನೇ ದಿನ ನಾನು ಈ ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ.

11. 1971 ರಲ್ಲಿ ನಮ್ಮ ತಂದೆಗೆ ಮಾರಾಟ ಮಾಡಿದ್ದ ವ್ಯಕ್ತಿಯಿಂದ ರಾಮಚಂದ್ರಚಾರಿ ಯವರು ಸರ್ವೆ ನಂಬರ್ 64 ರಲ್ಲಿರುವ 4 ಎಕರೆ ಜಮೀನನ್ನು ಖರೀದಿಸಿದ್ದರು ಎಂದರೆ ಸರಿ. ಸರ್ವೆ ನಂಬರ್ 64 ರಲ್ಲಿ ರಾಮಚಂದ್ರಚಾರಿಯವರೇ ಸ್ವಾಧೀನದಲ್ಲಿದ್ದಾರೆ ಎಂದರೆ ಸಾಕ್ಷಿಯು ಅದು ಬೇರೆ ಕಡೆ ಇದೆ ಎಂದು ನುಡಿಯುತ್ತಾರೆ. ವಕೀಲರು ನಂತರ ಸರ್ವೆ ನಂಬರ್ 64 ಅಲ್ಲ ಅದು 67 ಎಂದು ನುಡಿಯುತ್ತಾರೆ. ನನ್ನ ತಂದೆ ಸರ್ವೆ ನಂಬರ್ 67 ರಲ್ಲಿ ಜಮೀನನ್ನು ಖರೀದಿಸಿದ್ದಾರೆ. ಸರ್ವೆ ನಂಬರ್ 67 ರಲ್ಲಿ ರೆವಿನ್ಯೂ ಅಧಿಕಾರಿಗಳೊಂದಿಗೆ ಶಾಮೀಲಾಗಿ 5 ಪೋಡುಗಳನ್ನು ಮಾಡಿಸಿದ್ದೇವೆ ಎಂದರೆ ಸರಿಯಲ್ಲ. ದಾವಾಪತ್ರದ 3 ನೇ ಖಂಡಿಕೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

12. ನನ್ನ ದಾವೆಯಲ್ಲಿ ಪ್ರತಿವಾದಿಗಳು ಯಾವ ದಿನಾಂಕ, ತಿಂಗಳು ಮತ್ತು ವರ್ಷದಂದು ತೊಂದರೆ ಕೊಟ್ಟರು ಎಂದು ನಮೂದಿಸಿಲ್ಲ ಎಂದರೆ ಸರಿಯಲ್ಲ. ನನಗಾಗಲೀ, ನನ್ನ ಆಸ್ತಿಗಾಗಲೀ ತೊಂದರೆ ಕೊಟ್ಟರೆ ನಾನು ದೂರನ್ನು ಸಲ್ಲಿಸುತ್ತೇನೆ. ನಾನು ಯಾವುದೇ ದೂರನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಪೊಲೀಸರು ದೂರನ್ನು ದಾಖಲಿಸಿಕೊಂಡಿದ್ದಾರೆ, ಅದರ ಸಂಖ್ಯೆ ಗೊತ್ತಿಲ್ಲ. ನಾನು ದಾಖಲೆಗಳನ್ನು ಕೊಟ್ಟ ಬಗ್ಗೆ ಸರಿಯಾಗಿ ನೆನಪಿಲ್ಲ. ನಾನು ಯಾವುದೇ ದಾಖಲೆಗಳನ್ನು ಕೊಟ್ಟಿಲ್ಲ, ಅದರಿಂದ ನನಗೆ ನೆನಪಿಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತಿನಲ್ಲಿ ಪ್ರತಿವಾದಿಗಳೇ ಸ್ವಾಧೀನ ಇರುವ ಕಾರಣ ಅವರು ನನಗೆ ತೊಂದರೆ ಕೊಡುವ ಪ್ರಮೇಯ ಇಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಆಜುಬಾಜು ನನ್ನ ಮತ್ತು ಪ್ರತಿವಾದಿಗಳ ಕುಟುಂಬ ಮಾತ್ರ ಇರುವುದು ಎಂದರೆ ಸಾಕ್ಷಿಯು ದಾವಾಸ್ವತ್ತಿನಿಂದ ನಾವು 3 ಕಿ.ಮೀ. ಅಂತರ ಇದ್ದೇವೆ ಹಾಗೂ ಪ್ರತಿವಾದಿಗಳು 1 ಕಿ.ಮೀ ಅಂತರ ಇದ್ದಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ನಮಗಿಂತ ಆರ್ಥಿಕವಾಗಿ,

ರಾಜಕೀಯವಾಗಿ ಪ್ರಬಲರು. ಆ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. 1 ನೇ ಪ್ರತಿವಾದಿ ಎಂ.ಎಲ್.ಎ ಅಲ್ಲ, ಜಿಲ್ಲಾ ಪಂಚಾಯತಿ ಮತ್ತು ಗ್ರಾಮ ಪಂಚಾಯತಿ ಮೆಂಬರ್ ಅಲ್ಲ ಎಂದರೆ ಸರಿ.

13. ನಾನೇ ಪ್ರತಿವಾದಿಗಳ ವಿರುದ್ಧ ದೌರ್ಜನ್ಯ ನಡೆಸುತ್ತಿದ್ದೇನೆ ಎಂದರೆ ಸರಿಯಲ್ಲ. ಮೂಲ ನೊಂದಾಯಿತ ವಿಭಾಗ ಪತ್ರವನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಮೂಲ ವಿಭಾಗ ಪತ್ರವನ್ನು ಹಾಜರುಪಡಿಸಿದರೆ ನೈಜ ಪರಿಸ್ಥಿತಿ ಗೊತ್ತಾಗುತ್ತದೆ ಎಂದು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಮೂಲ ವಿಭಾಗ ಪತ್ರ ನನ್ನೊಂದಿಗೆ ಇದೆ. ನನಗೆ ಮೂಲ ವಿಭಾಗ ಪತ್ರವನ್ನು ಹಾಜರುಪಡಿಸಲು ತೊಂದರೆ ಇಲ್ಲ. ಪ್ರತಿವಾದಿಗಳು ಹೊಗೆಸೊಪ್ಪನ್ನು ತುಳಿದು ಹಾಳು ಮಾಡಿದ ಬಗ್ಗೆ ಯಾವುದೇ ಪೋಟೋವನ್ನು ಹಾಜರುಪಡಿಸಿಲ್ಲ. ಪ್ರತಿವಾದಿಗಳು ಹೊಗೆಸೊಪ್ಪನ್ನು ಹಾಳು ಮಾಡಿದ್ದ ಬಗ್ಗೆ ನೋಡಿದವರು ಇದ್ದಾರೆ. ಅವರ ಹೆಸರು ವೈರಮುಡಿ ನಾಯಕ, ಮರಿಯಪ್ಪ ಮತ್ತು ಆನಂದ. ಅವರನ್ನು ವಿಚಾರಣೆ ಮಾಡಲು ನನಗೆ ತೊಂದರೆ ಇಲ್ಲ.

14. ಪ್ರತಿವಾದಿಗಳಿಗೆ ನಾನು ತೊಂದರೆ ಕೊಟ್ಟ ಬಗ್ಗೆ ಪ್ರತಿವಾದಿಗಳು ನನ್ನ ವಿರುದ್ಧ ಸಿವಿಲ್ ವ್ಯಾಜ್ಯ ಹೂಡಿದ್ದಾರೆ ಎಂದರೆ ಸರಿಯಲ್ಲ. ದಾವಾಸ್ವತ್ತಿನಲ್ಲಿ ರಾಮಚಂದ್ರಚಾರಿಯವರ ಮೃತ ದೇಹವನ್ನು ದಫನ್ ಮಾಡಿದ್ದಾರೆ ಎಂದರೆ ಸರಿಯಲ್ಲ. ರಾಮಚಂದ್ರಚಾರಿಯವರ ಹೆಂಡತಿ 20–25 ದಿನಗಳ ಹಿಂದೆ ತೀರಿಕೊಂಡರು ಎಂದರೆ ಸರಿ. ಅವರನ್ನೂ ಸಹ ದಾವಾಸ್ವತ್ತಿನಲ್ಲಿ ದಫನ್ ಮಾಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ಪೋಟೋವನ್ನು ತೋರಿಸಿ ಅದರಲ್ಲಿರುವ ಭಾವಚಿತ್ರವು ದಾವಾಸ್ವತ್ತಿಗೆ ಸಂಬಂಧಿಸಿದ್ದು ಎಂದರೆ ಸಾಕ್ಷಿಯು ಇಲ್ಲವೆಂದು ನುಡಿಯುತ್ತಾರೆ. ದಾವಾಸ್ವತ್ತುಗಳಲ್ಲಿ ಈ ವರ್ಷ ಶುಂಠಿ ಬೆಳೆಯನ್ನು ಬೆಳೆದಿದ್ದೇವೆ. ಈ ವರ್ಷ ಬೆಳೆ ಬೆಳೆದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿಲ್ಲ. ಹಾಜರುಪಡಿಸಲು ತೊಂದರೆ ಇಲ್ಲ. ಸಾಕ್ಷಿಗೆ ಒಂದು ಪೋಟೋವನ್ನು ತೋರಿಸಿ ಅದರಲ್ಲಿ ಪ್ರತಿವಾದಿಗಳು ಶುಂಠಿ ಬೆಳೆಯನ್ನು ದಾವಾಸ್ವತ್ತಿನಲ್ಲಿ ಬೆಳೆದಿದ್ದಾರೆ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ಪೋಟೋದಲ್ಲಿ ತೋರಿಸಿದ ವ್ಯಕ್ತಿ 3 ನೇ ಪ್ರತಿವಾದಿ ಎಂದರೆ ಎಂದರೆ

ಸರಿಯಲ್ಲ. 3 ನೇ ಪ್ರತಿವಾದಿಯ ಅಸಲು ಹೆಸರು ಗೊತ್ತಿಲ್ಲ. 3 ನೇ ಪ್ರತಿವಾದಿಯನ್ನು ನೋಡಿಲ್ಲ. ಪೋಟೋವನ್ನು ತೋರಿಸಿ ಅದರಲ್ಲಿರುವ ವ್ಯಕ್ತಿ 3 ನೇ ಪ್ರತಿವಾದಿ ದಾವಾಸ್ವತ್ತಿನಲ್ಲಿ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

ಪ್ರಶ್ನೆಃ ನಾನು ಪಾಟೀ ಸವಾಲಿನಲ್ಲಿ ಈ ದಿನ 1.30 ರಿಂದ ಇಲ್ಲಿಯವರೆಗೂ ಕೇಳಿದಂತಹ ಎಲ್ಲಾ ವಿಚಾರಗಳು ನೈಜ ಘಟನೆ?

ಉತ್ತರಃ ಸರಿಯಲ್ಲ.

15. ನಾನು ಕೇಳಿದ ಎಲ್ಲಾ ವಿಚಾರಗಳು ನೈಜ ಘಟನೆ ಆಗಿದ್ದರೂ ಸಹ ಸುಳ್ಳು ದಾವೆಯನ್ನು ಹೂಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಸರಿಯಲ್ಲ ಎಂದು ನುಡಿಯುತ್ತಾರೆ. ನಾನು ದಾವಾಸ್ವತ್ತಿನ ಅನುಮಾನಾಸ್ಪದ ಮಾಲೀಕ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**ತೆರದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**